**ಓ.ಎಸ್ ನಂ.131/2022 ಡಿ.ಡಬ್ಲ್ಯೂ-1 (ಸುರೇಂದ್ರ)**

**ಸಾಕ್ಷಿಯನ್ನು ದಿನಾಂಕಃ 01.04.2026 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ 6 ರವರ ಪರ ವಕೀಲರಾದ ಶ್ರೀ ಎಸ್.ಕೆ. ಜಿ. ವಕೀಲರಿಂದಃ**

4. ದಾವಾ ಐಟಂ ನಂ 3 ರ ಆಸ್ತಿಯು ನಮ್ಮ ತಾತನಿಂದ ತಂದೆಯವರಿಗೆ ಬಂದಿರುತ್ತದೆ. ಸಾಕ್ಷಿಗೆ ನೀವು ಹೇಳಿದಂತೆ ನಿಮ್ಮ ತಾತನಿಂದ ತಂದೆಯವರಿಗೆ ಬಂದ ಆಸ್ತಿಯು ಐಟಂ ನಂ 3 ರ ಜಮೀನಿಗೆ ಸಂಬಂದಿಸಿದಂದತೆ ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಆಸ್ತಿಯು ಒಟ್ಟು ಕುಟುಂಬದಲ್ಲಿಯೇ ಇರುತ್ತದೆ ಇನ್ನೂ ಹಂಚಿ ಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಾತನಿಂದ ತಂದೆಯವರಿಗೆ ಹೆಸರಿಗೆ ಆದ ಬಗ್ಗೆ ಕಂದಾಯ ದಾಖಲಾತಿಗಳಾದ ಆರ್ ಟಿ ಸಿ, ಎಂ ಆರ್ ದಾಖಲಾತಿಗಳನ್ನು ಹಾಕಿರುತ್ತೀರಾ ಎಂದರೆ ಅವುಗಳನ್ನು ನ್ಯಾಯಾಲಯಕ್ಕೆ ಹಾಕಿರುವುದಿಲ್ಲ ಆಸ್ತಿಯು ನಮ್ಮ ತಂದೆಯ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈ ಹಿಂದೆ ಸಾಕ್ಷಿ ನುಡಿಯು ಸಮಯ ದಾವಾ ಐಟಂ ನಂ 3 ರ ಆಸ್ತಿಯು 2 ನೇ ಪ್ರತಿವಾದಿ ರಾಮೇಗೌಡ ರವರ ಹೆಸರಿನಲ್ಲಿ ಬರುತ್ತಿರುತ್ತದೆ ಎಂದು ತಿಳಿಸಿದ್ದು ಅದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಯಾವ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಾನು ಹಿಂದಿನ ಬಾರಿ ಸಾಕ್ಷಿ ನುಡಿಯಲು ಬಂದಾಗ ರಾಮೇಗೌಡ ರವರ ಹೆಸರಿನಲ್ಲಿ ಆಸ್ತಿಯು ಬರುತ್ತಿರುವ ಬಗ್ಗೆ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ .3 ಸ. ನಂ 10 ರ ಆಸ್ತಿಯು ಯಾರ ಹೆಸರಿನಲ್ಲಿ ಈಗ ಇರುತ್ತದೆ ಎಂದರೆ ಸಾಕ್ಷಿಯು ಅದು ನಮ್ಮ ತಂದೆಯವರ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನೀವು ಮತ್ತು ಪ್ರತಿವಾದಿ 2 ರಾಮೇಗೌಡ ರವರು ವ್ಯವಹಾರವನುನ ಒಟ್ಟಿಗೆ ಮಾತನಾಡಿಕೊಂಡು ಮಾಡುತ್ತೀರಾ ಎಂದರೆ ಸಾಕ್ಷಿಯು ನಾನು ಮತ್ತು 2 ನೇ ಪ್ರತಿವಾದಿ ರವರು ಒಟ್ಟಿಗೆ ಮಾತನಾಡಿಕೊಂಡು ಮಾಡಿಕೊಳ್ಳುತ್ತೇವೆ ಎಂದು ನುಡಿಯುತ್ತಾರೆ.

5. 6 ನೇ ಪ್ರತಿವಾದಿ ಕೆ ಎಲ್ ನಾಗರಾಜುರವರು ನನಗೆ ಗೊತ್ತಿರುವುದಿಲ್ಲ. ಅವರನ್ನು ಈ ದಾವೆಯಲ್ಲಿ ವಾದಿ ರವರು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. 2013 ರಲ್ಲಿ ಪ್ರತಿವಾದಿ 2 ರಾಮೇಗೌಡ ಮತ್ತು ಪ್ರತಿವಾದಿ 6 ರಾಮೇಗೌಡರ ನಡುವೆ ಯಾವ ವ್ಯವಹಾರ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. 2013 ರಲ್ಲೆ ರಾಮೇಗೌಡ ಮತ್ತು ಆತನ ಹೆಂಡತಿ ಮಕ್ಕಳುಗಳು ಪ್ರತಿವಾದಿ 6 ರವರಿಗೆ ದಾವಾ ಐಟಂ 3 ರ ಆಸ್ತಿಗೆ ಸಂಬಂಧಿಸಿದಂತೆ ನೊಂದಾಯಿತ ಕರಾರು ಪತ್ರವನ್ನು ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಪ್ರತಿವಾದಿ 2 ರವರು ಐಟಂ ನಂ 3 ರ ಆಸ್ತಿಗೆ ಸಂಬಂಧಿಸಿದಂತೆ ಎಸ್ ಬಿ ಐ ಬ್ಯಾಂಕ್ ಸರಗೂರು ಶಾಖೆಯಲ್ಲಿ ಸಾಲ ಪಡೆದುಕೊಂಡಿದ್ದರು ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1987-88 ರಲ್ಲೆ 2 ನೇ ಪ್ರತಿವಾದಿಯವರು ಅವರ ಹೆಸರಿಗೆ ದಾವ ಐಟಂ ನಂ.3 ರ ಆಸ್ತಿಗೆ ಸಂಬಂಧಿಸಿದಂತೆ ಖಾತೆ ಮಾಡಿಸಿಕೊಂಡು ಪ್ರತಿವಾದಿ 6 ರವರಿಗೆ ಕ್ರಯ ಪತ್ರ ಆಗುವ ವರೆಗೂ ಅವರ ಹೆಸರಿನಲ್ಲಿ ಆಸ್ತಿಯು ಬರುತ್ತಿತ್ತು ಎಂದರೆ ಸಾಕ್ಷಿಯು ಅದು ಒಟ್ಟು ಕುಟುಂಬದಲ್ಲಿಯೇ ಇರುತ್ತದೆ ಎಂದು ನುಡಿಯುತ್ತಾರೆ. ಐಟಂ ನಂ 3 ರ ಆಸ್ತಿಯನ್ನು ನಮ್ಮ ಅಜ್ಜಿ ಹಾಲಮ್ಮ ನವರು ಖರೀದಿಸಿದಂತಹ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯು ಹಾಲಮ್ಮ ನವರ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ಅದನ್ನು ನಮ್ಮ ತಂದೆ ಅವರ ಹೆಸರಿಗೆ ಎಂ ಆರ್ 2/1986-87 ರಂತೆ ಮಾಡಿಸಲಾಗಿರುತ್ತದೆ ಎಂದರೆ ಸರಿ. 1987-88 ರಲ್ಲಿ ಎಂ ಆರ್ 6/1987-88 ರಂತೆ ನನ್ನ ತಮ್ಮ ರಾಮೇಗೌಡರ ಹೆಸರಿಗೆ ಖಾತೆ ಮಾಡಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಒಟ್ಟಿಗೆ ಇರುತ್ತದೆ ಅದನ್ನು ಯಾರ ಹೆಸರಿಗೂ ಮಾಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ರಾಮೇಗೌಡ ರವರು ಬ್ಯಾಂಕ್ ನಲ್ಲಿ ಮಾಡಿದ್ದ ಸಾಲವನ್ನು ತೀರಿಸಲು ಮತ್ತು ತಮ್ಮ ಮೈನರ್ ಮಕ್ಕಳ ಪಾಲನೆ ಮತ್ತು ವಿದ್ಯಾಬ್ಯಾಸದ ಖರ್ಚಿಗಾಗಿ ಐಟಂ 3 ರ ಆಸ್ತಿಯನ್ನು ಪ್ರತಿವಾದಿ 6 ರವರಿಗೆ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಮಾಡಿರುವುದಿಲ್ಲ ಎಲ್ಲಾರು ಒಟ್ಟಿಗೆ ಇರುತ್ತೇವೆ ಎಂದು ನುಡಿಯುತ್ತಾರೆ. ಪ್ರತಿವಾದಿ 2 ರವರು ದಾವಾ ಐಟಂ ನಂ. 3 ರ ಆಸ್ತಿಗೆ ಸಂಬಂಧಿಸಿದಂತೆ ಪ್ರತಿವಾದಿ 6 ರವರಿಗೆ 6 ಲಕ್ಷ ರೂಗಳನ್ನು

ಪಡೆದುಕೊಂಡಿದ್ದರು ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿರುವುದೇ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಪ್ರತಿವಾದಿ 2 ರವರು ಪ್ರತಿವಾದಿ 6 ರವರಿಗೆ ಕರಾರು ಪತ್ರ ಬರೆದು ಕೊಟ್ಟಂತೆ ಕ್ರಯ ಪತ್ರವನ್ನು ಮಾಡಿಕೊಡದೆ ಇರುವುದರಿಂದ ಪ್ರತಿವಾದಿ 6 ರವರು ನ್ಯಾಯಾಲಯಕ್ಕೆ ದಾವೆ ಸಲ್ಲಿಸಿ ನ್ಯಾಯಾಲಯದ ಆದೇಶದಂತೆ ಕ್ರಯಪತ್ರವನ್ನು ಮಾಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದಿಂದ ಕ್ರಯ ಪತ್ರವನ್ನು ಬರೆಸಿಕೊಳ್ಳುವ ಸಮಯ 2 ನೇ ಪ್ರತಿವಾದಿ ರವರು ನ್ಯಾಯಾಲಯಕ್ಕೆ ಬಾರದೆ ಇದ್ದುದ್ದರಿಂದ 6 ನೇ ಪ್ರತಿವಾದಿ ರವರು ಉಳಿಕೆ ಹಣ ರೂ 50 ಸಾವಿರಗಳನ್ನು ನ್ಯಾಯಾಲಯಕ್ಕೆ ಡೆಪೋಸಿಟ್ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿಃ 25.10.2021 ರಂದು ಆದ ನೊಂದಾಯಿತ ಕ್ರಯಪತ್ರದಂತೆ ಪ್ರತಿವಾದಿ 6 ರವರ ಹೆಸರಿನಲ್ಲಿ ಎಂ ಆರ್ ಟಿ 9/2021-22 ರಂತೆ ಖಾತೆ ವರ್ಗಾವಣೆ ಯಾಗಿರುತ್ತದೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕ್ರಯಪತ್ರವಾದ ದಿನದಿಂದಲೂ ಪ್ರತಿವಾದಿ 6 ರವರು ದಾವಾ ಐಟಂ ನಂ. 3 ರ ಸ್ವತ್ತಿನಲ್ಲಿ ಸ್ವಾಧೀನ ಇರುತ್ತಾರೆ ಎಂದರೆ ಸಾಕ್ಷಿಯು ನಾವೇ ಸ್ವಾದೀನ ಇರುತ್ತೇವೆ ಎಂದು ನುಡಿಯುತ್ತಾರೆ. ಪ್ರತಿವಾದಿ 2 ರಾಮೇಗೌಡ ಮತ್ತು ಪ್ರತಿವಾದಿ 6 ರವರು ನಡುವೆ ಆದ ವ್ಯವಹಾರದ ಬಗ್ಗೆ ನ್ಯಾಯಾಲಯಕ್ಕೆ ನೀವು ಹಾಜರಾದ ಮೇಲೆ ಪ್ರತಿವಾದಿ 2 ರವರ ಬಳಿ ವಿಚಾರಿಸಿರುತ್ತೀರಾ ಎಂದರೆ ಸಾಕ್ಷಿಯು ದಾವೆಯನ್ನು ಹೂಡುವ ವರೆಗೂ ವ್ಯವಹಾರ ಆದ ಬಗ್ಗೆ ತಿಳಿದಿರಲಿಲ್ಲ ನಂತರ ನಾನು ಮತ್ತು ಅಕ್ಕಂದಿರು ಮಾತನಾಡಿಕೊಂಡು ಒಬ್ಬನೇ ಹೇಗೆ ಮಾರಾಟ ಮಾಡುತ್ತಾನೆ ಎಂದು ಈ ದಾವೆಯನ್ನು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ರಾಮೇಗೌಡ ರಿಂದ ನಾಗರಾಜು ರವರ ಹೆಸರಿಗೆ ದಾವಾ ಐಟಂ ನಂ. 3 ರ ಆಸ್ತಿಗೆ ಸಂಬಂಧಿಸಿದಂತೆ ಖಾತೆ ಬದಲಾವಣೆ ಆದ ಬಗ್ಗೆ ಯಾವುದಾದರು ಸಕ್ಷಮ ಆಧಿಕಾರಿಗಳ ಮುಂದೆ ಪ್ರಶ್ನಿಸಿರುತ್ತೀರಾ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಾಮೇಗೌಡ ಮತ್ತು ನಾಗರಾಜುರವರ ನಡುವೆ ದಾಖಲಾದ ದಾವೆಗೆ ಸಂಬಂಧಿಸಿದಂತೆ

ಪಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ರಾಮೇಗೌಡ ಮತ್ತು ನಾಗರಾಜು ರವರ ನಡುವೆ ಆದ ಎಲ್ಲಾ ವ್ಯವಹಾರಗಳು ತಿಳಿದ್ದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 3 ರ ಆಸ್ತಿಯು ನಮ್ಮ ಅಜ್ಜಿ ಹಾಲಮ್ಮ ನವರ ಸ್ವಯಾರ್ಜಿತ ಆಸ್ತಿಯಾಗಿದ್ದರಿಂದ ಅದನ್ನು ನಮ್ಮ ತಂದೆ ನಾಗೇಗೌಡರ ಹೆಸರಿಗೆ ಖಾತೆ ಮಾಡಿಸಿರುತ್ತಾರೆ ನಂತರ ನಮ್ಮ ತಂದೆಯವರ ಹೆಸರಿನಿಂದ ರಾಮೇಗೌಡರ ಹೆಸರಿಗೆ ಕಾನೂನುಬದ್ದವಾಗಿಯೇ ಖಾತೆ ಮಾಡಿಸಲಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 3 ರ ಆಸ್ತಿಯನ್ನು ಈ ಹಿಂದೆಯೇ ರಾಮೇಗೌಡರ ಹೆಸರಿಗೆ ಖಾತೆ ಮಾಡಿಸಿರುವುದರಿಂದ ಅದು ಅವರ ಸ್ವಯಾರ್ಜಿತ ಆಸ್ತಿ ಯಾಗಿದ್ದರಿಂದ ಅದರಲ್ಲಿ ಭಾಗ ಕೇಳಲು ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿಯು ಅದು ಒಟ್ಟು ಕುಟುಂಬದ ಆಸ್ತಿ ಎಲ್ಲಾರು ಒಟ್ಟಿಗೆ ಇರುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಮ್ಮ ತಂದೆ ನಾಗೇಗೌಡ ರವರ ಹೆಸರಿನಿಂದ ರಾಮೇಗೌಡ ರವರ ಹೆಸರಿಗೆ ಖಾತೆ ಯಾದ ಬಗ್ಗೆ ನೀವು ಎಲ್ಲಿಯು ಪ್ರಶ್ನಿಸಿರುವುದಿಲ್ಲ ಎಂದರೆ ಸಾಕ್ಷಿಯು ಅವರ ಹೆಸರಿಗೆ ಖಾತೆಯೇ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ಅಕ್ಕಂದಿರು ಮಾತನಾಡಿಕೊಂಡು ದಾವೆ ಮಾಡಿರುತ್ತೇವೆ ಎಂದು ತಿಳಿಸಿದ್ದು ಎಲ್ಲಾ ವಿಚಾರಗಳು ತಿಳಿದಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ